	ಪಾಯದ ಮಟ್ಟ	ಕಿಟಕಿಯ ವರೆಗೆ	ಛಾವಣಿ ವರೆಗೆ	ಒಟ್ಟು
ಜಿಲ್ಲಾಧಿಕಾರಿಗಳಿಂದ	680	155	76	911
ಕೆ.ಹೆಚ್.ಬಿ.ಯಿಂದ	587	3	-	590
				1501

ಇ) ಜಿಲ್ಲಾಧಿಕಾರಿಗಳಿಂದ : ರೂ. 76.196 ಲಕ್ಷಗಳು.

ಕೆ.ಹೆಚ್.ಬಿ.ಯಿಂದ : ರೂ. 15.51 ಲಕ್ಷಗಳು.

ಈ) ಪ್ರಗತಿಯಲ್ಲಿರುವ 1501 ಮನೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

ಉ) ರೂ. 225.15 ಲಕ್ಷಗಳು.

ಅನುಬಂಧ -1

ಹಾಸನ ಜಿಲ್ಲೆಯಲ್ಲಿ ಆಶ್ರಯ ಯೋಜನೆಯಡಿ ಜನವರಿ 1994ರ ಅಂತ್ಯಕ್ಕೆ ಪೂರ್ಣಗೊಂಡ ಮನೆಗಳ ತಾಲ್ಲೂಕುವಾರು ವಿವರ

ತಾಲ್ಲೂಕಿನ ಹೆಸರು	ಪೂರ್ಣಗೊಂಡ ಮನೆಗಳ ಸಂಖ್ಯೆ		
	ಜಿಲ್ಲಾಧಿಕಾರಿಗಳಿಂದ	ಕ.ಗೃಹ ಮಂಡಳಿಯಿಂದ	
1) ಹಾಸನ	20	25	
2) ಅರಸೀಕೆರೆ	140	-	
3) ಹೊಳೆನರಸೀಪುರ	160	-	
4) ಚನ್ನರಾಯಪಟ್ಟಣ	227	-	
5) ಸಕಲೇಶಪುರ	17	42	
6) ಅಲೂರು	50	-	
7) ಬೇಲೂರು	72	-	
8) ಅರಕಲಗೂಡು	62	-	
	748	67	
	ಒಟ್ಟು	815 ಮನೆಗಳು	

ಹೊಳೆನರಸೀಪುರ ಪುರಸಭೆಗೆ ನೀಡಿರುವ ಅನುದಾನದ ವಿವರ ಕುರಿತು

149 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಹೊಳೆನರಸೀಪುರ ಪುರಸಭೆಗೆ ಸರ್ಕಾರ ನೀಡಲು ನಿರ್ಧರಿಸಿರುವ ಅನುದಾನವೆಷ್ಟು?

ಆ) ಮೇಲ್ಕಂಡ ಪುರಸಭೆಯವರು ಎಷ್ಟು ಹಣವನ್ನು ಸರ್ಕಾರದಿಂದ ಕೋರಿದ್ದರು?

ಇ) 1994ರ ಮಾರ್ಚ್ ಅಂತ್ಯದಲ್ಲಿ ಎಲ್ಲಾ ಅನುದಾನಗಳ ಹಣವನ್ನು ಬಿಡುಗಡೆ ಮಾಡಲಾಗುವುದೇ?

ಈ) ಈವರೆಗೆ ಯಾವ ಯಾವ ಯೋಜನೆಗಳಿಗೆ ಅನುದಾನ ನೀಡಲಾಗಿದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಜಕಾತಿ ಅನುದಾನದ ಮೊತ್ತ ಒಟ್ಟು ರೂ. 9,91,232.00ಗಳನ್ನು 4 ಸಮನಾದ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು.

ವಾಹನ ತೆರಿಗೆ 4.20 ಲಕ್ಷ ರೂ.ಗಳನ್ನು ವರ್ಷಕೊಮ್ಮೆ (ಮಾರ್ಚ್ ಅಂತ್ಯದಲ್ಲಿ) ಬಿಡುಗಡೆ ಮಾಡಲಾಗುವುದು.

ಆ) ಪುರಸಭೆಯಿಂದ ಯಾವುದೇ ಕೋರಿಕೆ ಬಂದಿಲ್ಲ. ಆದರೆ, ಮಾನ್ಯ ಶಾಸಕರು, ಹೊಳೇನರಸೀಪುರ ಇವರು ರೂ. 5.00 ಲಕ್ಷಗಳನ್ನು ಕೋರಿರುತ್ತಾರೆ.

ಇ) ಸರ್ಕಾರದಲ್ಲಿ ಇರುವ ಎಲ್ಲಾ ಅನುದಾನಗಳನ್ನು ಬಿಡುಗಡೆ ಮಾಡಲಾಗುವುದು.

ಈ) ಐ.ಡಿ.ಎಸ್.ಎಂ.ಟಿ. ಯೋಜನೆ ಅಡಿಯಲ್ಲಿ 1982-83ನೇ ಸಾಲಿಗೆ ಒಟ್ಟು 75.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಅಂಜನಮೂರ್ತಿ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ 2ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯಗಳು

11.00 ಎ.ಎಂ

ಮುಧೋಳ ತಾಲ್ಲೂಕಿನ ಸಮೀರವಾಡಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಕಬ್ಬು ಬೆಳೆಗಾರರಿಗೆ ತಮ್ಮ ಕಬ್ಬನ್ನು ಹೊರಗಡೆಗೆ ಸಾಗಿಸಲು ಪರವಾನಗಿ ಕೊಡುವುದರ ಬಗ್ಗೆ

ಶ್ರೀ ಹೆಚ್. ವಿಶ್ವನಾಥಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ಮುಧೋಳ ತಾಲ್ಲೂಕಿನಲ್ಲಿ ಸಮೀರವಾಡಿ ಎಂಬ ಸಕ್ಕರೆ ಕಾರ್ಖಾನೆ ಇದೆ. ಆ ಕಾರ್ಖಾನೆ ವ್ಯಾಪ್ತಿಯಲ್ಲಿ ಇವತ್ತು ಸಾವಿರಾರು ಎಕರೆಯಲ್ಲಿ ಕಬ್ಬನ್ನು ಬೆಳೆದಿದ್ದಾರೆ. ಆ ಕಾರ್ಖಾನೆಗೆ ಇರುವ ಅರೆಯುವ ಶಕ್ತಿಗಿಂತ ಹೆಚ್ಚಾಗಿ ಕಬ್ಬನ್ನು ಅಲ್ಲಿ ಬೆಳೆದಿದ್ದರಿಂದ ಅದನ್ನು ಮಹಾರಾಷ್ಟ್ರ ಮತ್ತಿತರ ಕಡೆಗಳಿಗೆ ತೆಗೆದುಕೊಂಡು ಹೋಗಿ ಅರೆಯಲಿಕ್ಕೆ ಕೊಡುವುದು ಅವಶ್ಯಕವಾಗಿದೆ. ಈ ವಿಚಾರದಲ್ಲಿ ಅಲ್ಲಿಯ ರೈತರೂ ಸಹ ಅನೇಕ ಸಲ ಇಲ್ಲಿ ಪ್ರತಿನಿಧಿಸಿದ್ದಾರೆ. ಇವತ್ತಿನ ದಿವಸ ಲಕ್ಷಾಂತರ ಟನ್ ಕಬ್ಬು ಹೆಚ್ಚಿಗೆ ಇದೆ. ಅದನ್ನು ಅರೆಯುವ ಸಾಮರ್ಥ್ಯ ಆ ಸಕ್ಕರೆ ಕಾರ್ಖಾನೆಗೆ ಇಲ್ಲ. ಅದನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದರೆ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಪೋಲೀಸರು ತಡೆಹಾಕಿದ್ದಾರೆ. ಇದು ನಮ್ಮ ಗಮನಕ್ಕೆ ಬಂದಿದೆ. ಸರ್ಕಾರದ ಗಮನಕ್ಕೂ ಬಂದಿದೆ. ಇವತ್ತೇನು ಹೊಸದಾಗಿ ಈ ರೀತಿ ಆಗುತ್ತಿಲ್ಲ. ಹೋದ ಸಾರಿ ಸಹ ಇದೇ ರೀತಿ ಆಗಿದ್ದರಿಂದ ಅನೇಕ ರೈತರು ತಮ್ಮ ಕಬ್ಬಿನ ಬೆಳೆಯನ್ನು ಸುಟ್ಟಿದ್ದಾರೆ. ಆದ್ದರಿಂದ ಸರ್ಕಾರದ ಪರವಾಗಿ ಸಕ್ಕರೆ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಇದರ ಬಗ್ಗೆ ಸಚಿವರು ಪರಿಶೀಲನೆ ಮಾಡಿ ಅವಶ್ಯಕವಾದ ಒಂದು ಹೇಳಿಕೆಯನ್ನು ನೀಡಬೇಕು. ಅಲ್ಲಿ ನಿಜವಾಗಿ ರೈತರು ಬೆಳೆದ ಬೆಳೆ ಹೆಚ್ಚಾಗಿದೆ. ಸಕ್ಕರೆ ಕಾರ್ಖಾನೆಗೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚಾಗಿದ್ದರೆ ಆ ಬೆಳೆಯನ್ನು ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ ತಾವು ಪರವಾನಗಿ ಕೊಡಬೇಕು ಹಾಗೂ ಸಂಬಂಧಪಟ್ಟವರಿಗೆ ಸೂಕ್ತ